ಪಾಸಾಗುವವರೆಗೂ, ೧೯೮೪ಕ್ಕಿಂತ ಮೊದಲು ಯಾರು ಸಾಗುವಳಿ ಮಾಡುತ್ತಿದ್ದರು ಅವರನ್ನು ಎವಿಕ್ಷನ್ ಮಾಡಬಾರದು ಎಂದು ಸರ್ಕಾರ್‌ಲರ್ ಕಳಿಸಿದೆ. ಆಮೇಲೆ ರಿಸರ್ವ್ ಫಾರೆಸ್ಟ್‌ನಲ್ಲಿ ೧೯೭೮ಕ್ಕಿಂತ ಮೊದಲು ಅತಿಕ್ರಮಣ ಮಾಡಿದವರಿಗೆ ಫಾರೆಸ್ಟ್ ಇಲಾಖೆಯಲ್ಲಿ ಕಮಿಟಿಯನ್ನು ನೇಮಿಸಿದ್ದೇವೆ. ಆ ಕಮಿಟಿಯನ್ನು ಇತ್ತೀಚೆಗೆ ನೇಮಿಸಿದ್ದೇವೆ. ಕೆಲವು ಕಡೆ ಇನ್ನೂ ನೇಮಿಸಿಲ್ಲ. ಕಮಿಟಿ ಕಂಟಿನ್ಯೂ ಆಗುತ್ತದೆ. ಅದಕ್ಕೆ ಕೇಂದ್ರ ಸರ್ಕಾರದ ಒಪ್ಪಿಗೆ ಬೇಕಾಗುತ್ತದೆ, ಆ ಒಪ್ಪಿಗೆಯನ್ನು ಪಡೆದುಕೊಳ್ಳತಕ್ಕ ಪ್ರಯತ್ನ ಮಾಡುತ್ತೇವೆ. ಸಿ ಅಂಡ್ ಡಿ ಕ್ಲಾಸ್ ಜಮೀನು ಏನಿದೆ ಅದರ ಬಗ್ಗೆ ಅನೇಕ ಸಲ ಹೇಳಿದ್ದೇನೆ. ೧೯೮೦–೮೧ನೇ ಇಸವಿಯಲ್ಲಿ ಸಂಪಾರು ೨೫ ಲಕ್ಷ ಎಕರೆ ಜಮೀನು ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ವರ್ಗಾವಣೆ ಆಗಿದೆ. ಅರಣ್ಯ ಇಲಾಖೆಯವರು ಅರಣ್ಯವನ್ನು ಬೆಳೆಸುತ್ತಾ ಇದ್ದಾರೆ. ಆದರೆ ಆಜ್ಞೆ ಆಗುವುದಕ್ಕಿಂತ ಮುಂಚೆ ಕೆಲವು ಕಡೆ ಅತಿಕ್ರಮಣ ಮಾಡಿ, ಸಾಗುವಳಿ ಮಾಡಿರತಕ್ಕ ಜನರು ಇದ್ದಾರೆ. ೮-೧೦ ವರ್ಷಗಳಿಂದ ಇದ್ದು, ಮನೆಕಟ್ಟಿಕೊಂಡು ತೋಟಗಳನ್ನು ಮಾಡಿಕೊಂಡಿದ್ದಾರೆ. ಇದರ ಬಗ್ಗೆ ಕಾನೂನು ಇಲಾಖೆಯ ಸಲಹೆಯನ್ನು ಪಡೆದುಕೊಂಡಿದ್ದೇನೆ. ಆಜ್ಞೆಯನ್ನು ಇನ್ನು ಹೊರಡಿಸಿಲ್ಲ. ಅರಣ್ಯ ಇಲಾಖೆಗೆ ವರ್ಗಾಹಿಸಿದ ಮೇಲೆ ಕೇಂದ್ರ ಸರ್ಕಾರದ ಒಪ್ಪಿಗೆ ಪಡೆಯಬೇಕೆಂದು ಹೇಳುತ್ತಿದ್ದಾರೆ. ಆದರೆ ನನ್ನ ಅಭಿಪ್ರಾಯ ಅದರ ಅವಶ್ಯಕತೆ ಇಲ್ಲ, ಈ ಮನೆಯಲ್ಲಿ ಹೇಳಿದ್ದೇನೆ. ಸೂಕ್ತವಾದಂತಹ ಆಜ್ಞೆಯನ್ನು ಮಾಡುವವರೆಗೆ ಅರಣ್ಯ ಇಲಾಖೆಯ ಭೂಮಿಯನ್ನು ಅತಿಕ್ರಮಣ ಮಾಡಿದವರನ್ನು ಬಿಡಿಸತಕ್ಕ ಪ್ರಯತ್ನ ಮಾಡುವುದಿಲ್ಲ. ಆದರೆ ಇತ್ತೀಚೆಗೆ ಈ ಮಸೂದೆ ಬಂದಮೇಲೆ ಅರಣ್ಯ ಬೆಳೆಸತಕ್ಕ ಭೂಮಿಯನ್ನು ಅನೇಕ ಜನ ಅತಿಕ್ರಮಣ ಮಾಡಿದ್ದಾರೆ. ಹೊಸದಾಗಿ ಅತಿಕ್ರಮಣ ಮಾಡಿರತಕ್ಕ ಪ್ರಸಂಗಗಳು ಇವೆ. ಆದರೆ ಇದಕ್ಕೆ ಅವಕಾಶವನ್ನು ಕೊಡುವುದಿಲ್ಲ. ಬಹಳ ವರ್ಷಗಳಿಂದ ಬಗರ್ ಹುಕುಂ ಸಾಗುವಳಿ ಮಾಡಿರತಕ್ಕವರಿಗೆ ತೊಂದರೆ ಕೊಡಬೇಡಿಯೆಂದು ಅಧಿಕಾರಿಗಳಿಗೆ ಸೂಚನೆ ಕೊಡುತ್ತೇನೆ. ಮತ್ತೆ ತಾಲ್ಲೂಕು ಮಟ್ಟದಲ್ಲಿ ಮೂರು ಜನ ಸದಸ್ಯರುಗಳು ಇದ್ದರೆ ಒಬ್ಬರು ಮಾತ್ರ ಸಮಿತಿಯಲ್ಲಿರುತ್ತಾರೆ.

ನಿಯಮ ೩೩ಳಿರ ಮೇರೆಗೆ

೧) ರಾಜಾಜಿನಗರದ ೬ನೇ ವಿಭಾಗದಲ್ಲಿರುವ ಸರ್ಕಾರಿ ನೌಕರರ ವಸತಿ ಗೃಹಗಳಲ್ಲಿರುವ ಕೊಳವೆ ಬಾವಿಗಳು ಕೆಟ್ಟು ಹೋಗಿ ತೊಂದರೆಯಾಗಿರುವುದರ ಬಗ್ಗೆ.

ಶ್ರೀ ಆರ್, ವೆಂಕಟರಾವಯ್ಯ.—ಮಾನ್ಯ ಅಧ್ಯಕ್ಷರೆ, ರಾಜಾಜಿನಗರದ ೬ನೇ ವಿಭಾಗದಲ್ಲಿರುವ ಸರ್ಕಾರಿ ನೌಕರರ ವಸತಿ ಗೃಹಗಳಲ್ಲಿ ಹೆಚ್. ಮತ್ತು ಜೆ ಬ್ಲಾಕಿನ ಕೊಳವೆ ಬಾವಿ ೧೫ ದಿನಗಳಿಂದ ಕೆಟ್ಟಿದ್ದು ಅದನ್ನು ದುರಸ್ತಿ ಮಾಡಿ, ಅಲ್ಲಿ ವಾಸಿಸುವ ಜನಗಳಿಗೆ ನೀರಿಗಾಗಿ ಬಹಳ ತೊಂದರೆಯಾಗಿರುತ್ತದೆ. ಆ ಬಗ್ಗೆ ಅಲ್ಲಿಯ ನಿವಾಸಿಗಳು ಸಂಬಂಧಪಟ್ಟ ಸಹಾಯಕ ಕಾರ್ಯಕಾರಿ ಅಭಿಯಂತರನ್ನು ಸಂಪರ್ಕಿಸಿದಾಗ ಇಲಾಖೆಯಲ್ಲಿ ಯಂತ್ರದ್ದುರಸ್ತಿಗಾಗಿ ಹಣವಿಲ್ಲವೆಂದು ಮತ್ತು ಈ ಹಿಂದೆ ಇದೇ ರೀತಿ ದುರಸ್ತಿ ಮಾಡಿಸಿದ್ದ ಕೆಲಸಗಳಿಗೆ ಇನ್ನು ಹಣ ಪಾವತಿ ಆಗಿಲ್ಲವೆಂದು ತಿಳಿಸಿರುತ್ತಾರೆ.

ಆದ್ದರಿಂದ ಈ ಬ್ಲಾಕುಗಳ ಯಂತ್ರವನ್ನು ದುರಸ್ತಿ ಮಾಡಲು ಹಾಗೂ ಇದಕ್ಕೆ ಪರ್ಯಾಯ ವ್ಯವಸ್ಥೆ ಮಾಡಬೇಕೆಂದು ಇಲಾಖೆಯವರಿಗೆ ನಿರ್ದೇಶಿಸಿ ಮತ್ತು ಹಣ ಒದಗಿಸಿ ಹೆಚ್. ಮತ್ತು ಜೆ ಬ್ಲಾಕಿನ್ನು ೧೫ ದಿವಸಗಳಿಂದ ನೀರಿಗಾಗಿ ಬವಣೆ ಪಡುತ್ತಿರುವ ಜನತೆಯ ತೊಂದರೆಯನ್ನು ಹೋಗಲಾಡಿಸಲು ಸರ್ಕಾರವು ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಈ ಸದನದ ಮೂಲಕ ತಿಳಿಯಪಡಿಸುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ ಈ ನೌಕರರ ವಸತಿ ಗೃಹಗಳಿಗೆ ಬೆಂಗಳೂರು ನೀರು ಸರಬರಾಜು ಮಂಡಳಿಯವರಿಂದ ನೀರಿನ ಸರಬರಾಜು ವ್ಯವಸ್ಥೆ ಇದೆ ಇದು ಸಾಲದೆ ಇರುವುದರಿಂದ ಮೂರು ಬೋರ್‌ವೆಲ್‌ಗಳಿಂದಲೂ ನೀರನ್ನು ಸರಬರಾಜು ಮಾಡಲಾಗುತ್ತಿದೆ.

ಜೆ, ವಂತ್ತು ಹೆಚ್. ಬ್ಲಾಕ್‌ಗಳಿಗೆ ನೀರನ್ನು ಸರಬರಾಜು ಮಾಡಲಿಂ ಬೋರ್‌ವೆಲ್ ಪಂಪು ಕಟ್ಟಿಪತ್ತು, ಇದನ್ನು ದುರಸ್ತಿ ಮಾಡಿ ೨೪-೫-೮೮ ರಿಂದ ಬೋರ್‌ವೆಲ್ ನೀರನ್ನು ಸಹ ಸರಬರಾಜು ಮಾಡಲಾಗುತ್ತಿದೆ ಇದಲ್ಲದೆ ಒಂದು ಸ್ಟಾಂಡ್ ಕೈ ಪಂಪನ್ನೂ ಸಹ ಒದಗಿಸಲು ಕ್ರಮಕೈಗೊಳ್ಳಲಾಗುವುದು.

೨. ಮಂಗಳೂರು ತಾಲ್ಲೂಕು ಕೊಂಪದವು ಗ್ರಾಮದ ಆರೋಗ್ಯ ಘಟಕಕ್ಕೆ ವೈದ್ಯಾಧಿಕಾರಿಗಳನ್ನು ನೇಮಿಸುವುದರ ಬಗ್ಗೆ

ಶ್ರೀ ರಮಾನಾಥ ರೈ,—ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರಕ್ಕೆ ಸಂಬಂಧಿಸಿದ ಮಂಗಳೂರು ತಾಲ್ಲೂಕಿನ ಕೊಂಪದವು ಗ್ರಾಮವು ತೀರಾ ಹಿಂದುಳಿದ ಪ್ರದೇಶವಾಗಿದ್ದು, ವಾಹನ ಸೌಕರ್ಯ ಕೂಡಾ ಇಲ್ಲದ ಕಗ್ರಾಮವಾಗಿದೆ ಆದರೆ ಈ ಪ್ರದೇಶದಲ್ಲಿ ಸರ್ಕಾರದ ಕೃಪೆಯಿಂದ ಪ್ರಾಥಮಿಕ ಆರೋಗ್ಯ ಘಟಕ ಸ್ಥಾಪನೆಯಾಗಿದೆ. ಕೆಲವಾರು ವರ್ಷಗಳಿಂದ ವೈದ್ಯಾಧಿಕಾರಿಗಳ ಕೊರತೆ ಇತ್ತು. ಆದರೆ ಇತ್ತೀಚೆಗೆ ವೈದ್ಯಾಧಿಕಾರಿಗಳ ನೇಮಕವಾಗಿ ೩ ತಿಂಗಳಾಗಿವೆ. ಇದರಿಂದ ಊರಿನ ಜನರಿಗೆ ತುಂಬಾ ಅನುಕೂಲವಾಗಿದೆ ಅವರು ಅಂತಹ ಪರಿಸರದಲ್ಲಿ ಸೇವೆ ಮಾಡಲು ಉತ್ಸುಕರೂ ಆಗಿದ್ದರು, ಆದರೆ ಈಗ ಆ ವೈದ್ಯಾಧಿಕಾರಿಗಳಿಗೆ ಬೆಂಗಳೂರಿಗೆ ವರ್ಗಾವಣೆಯ ಆಜ್ಞೆ ಬಂದಿದ್ದು. ಊರಿನ ಜನರಿಗೆ ಅಪಘಾತವಾಗಿದೆ.

ಹಳ್ಳಿಯಲ್ಲಿ ಸೇವೆ ಮಾಡಲು ಉತ್ಸುಕರಿರುವ ವೈದ್ಯರನ್ನು ನೇಮಕವಾದ ಮೂರೇ ತಿಂಗಳಲ್ಲಿ ನಗರ ಪ್ರದೇಶದಲ್ಲಿ ಸಾಕಷ್ಟು ವೈದ್ಯರಿದ್ದರೂ ವರ್ಗಾವಣೆ ಮಾಡಿದ ಉದ್ದೇಶವೇನು ಹಾಗೂ ಅಗತ್ಯ ವೇನು ?

ಜನರ ಹಿತಾಸಕ್ತಿಯಿಂದ ಸದರಿ ವೈದ್ಯಾಧಿಕಾರಿಗಳ ವರ್ಗಾವಣೆಯನ್ನು ರದ್ದುಗೊಳಿಸಿ ಅವರನ್ನು ಕೊಂಪದವಿನಲ್ಲಿಯೇ ಇರಿಗೊಳಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಇದರ ಬಗ್ಗೆ ಉತ್ತರವನ್ನು ತರಿಸಿಕೊಡುತ್ತೇನೆ.

೩. ಮಂಗಳೂರಿನ ಕಣ್ಣೂರು ಬಳಿ ಬರುವ ವಾಣಿಜ್ಯ ಇಲಾಖೆ ಗೇಟಿನಲ್ಲಿ ಅಡಿಕೆ ಬೆಳೆಗಾರರಿಗೆ ಕಿರುಕುಳವಾಗುತ್ತಿರುವುದರ ಬಗ್ಗೆ

ಶ್ರೀ ಕೆ. ಕುಶಾಲ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೈತರು ತಾವು ಬೆಳೆಸಿದ ಅಡಿಕೆಯನ್ನು ಮಂಗಳೂರಿನ ಸಹಕಾರಿ ಸಂಘಗಳಿಗಾಗಲೀ, ಇಲ್ಲವೇ ಮಂಗಳೂರಿನ ನಗರಕ್ಕೆ ವ್ಯಾಪಾರಕ್ಕಾಗಿ ವಾಹನಗಳಲ್ಲಿ ಕೊಂಡು ಹೋಗಬೇಕಾಗುತ್ತದೆ. ಈ ಹಿಂದಿನಿಂದಲೂ ಯಥೇಚ್ಛವಾಗಿ ಕೊಂಡು ಹೋಗುವುದು ವಾಡಿಕೆಯಾಗಿ ವ್ಯಾಪಾರ ಮಾಡಿ (ರೈತರು) ಬರುತ್ತಿದ್ದರು. ಇತ್ತೀಚೆಗೆ ಕಳೆದ ೧೦-೨೦ ದಿವಸಗಳಿಂದ ಅಡಿಕೆ ಬೆಳೆಗಾರರು, ತಾವು ಬೆಳೆದ ಅಡಿಕೆಯನ್ನು ವ್ಯಾಪಾರಕ್ಕೆ ಮಂಗಳೂರಿಗೆ ಕೊಂಡು ಹೋಗುವುದು. ಮಂಗಳೂರಿನ ಕಣ್ಣೂರು ಎಂಬಲ್ಲಿ ಬರುವ ವಾಣಿಜ್ಯ ಇಲಾಖೆಯ ತಪಾಸಣೆ ಗೇಟಿನಲ್ಲಿ ಇಲಾಖೆಯ ವರು ತಡೆದು ಬೆಳೆಗಾರರು ಮಾರಲೀಕರು ತಾವು ಬೆಳೆಸಿದ ಅಡಿಕೆಯ ಜಮೀನಿನ ಕಂದಾಯ ಇಲಾಖೆಯ ಪ್ರಮಾಣ ಪತ್ರಗಳಾದ (ಆರ್. ಟಿ. ಸಿ) ಪಹಣಿ ಮತ್ತು ಸಾಗುವಳಿ ಪ್ರಮಾಣಪತ್ರವನ್ನು ತಾಲ್ಲೂಕು ತಹಶೀಲ್ದಾರರಿಂದ ಹಾಜರುಪಡಿಸುವಂತೆ ಒತ್ತಾಯಿಸಿರುವುದು ತಿಳಿದುಬರುತ್ತದೆ. ಇದರಿಂದ ಬಹು ರೈತರಿಗೆ ತುಂಬಾ ಕಿರುಕುಳ ಪ್ರಾರಂಭವಾಗಿದೆ. ರೈತರಿಗೆ ಅನ್ಯಾಯವಾಗಿದೆ. ಈ ಸಾಗುವಳಿ ದೃಢ ಪತ್ರಗಳನ್ನು ಕಂದಾಯ ಇಲಾಖೆಯಿಂದ ಪಡೆಯಲು ರೈತನು ವಾರಗಟ್ಟಲೆ ಅಲೆದಾಡಬೇಕಾಗುವುದು. ಮತ್ತು ಈ ತೊಂದರೆಯನ್ನು ತಪ್ಪಿಸಲು ವಾಣಿಜ್ಯ ಇಲಾಖೆಯವರು ಕಡ್ಡಾಯವಾಗಿ ಅನುಸರಿಸುತ್ತಿರುವ ಈ ನಿಯಮವನ್ನು ಕೈಬಿಡ ಬೇಕಾಗಿ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ಕಳ್ಳ ವ್ಯಾಪಾರಿಗಳಿಂದ ವ್ಯಾಪಾರ ತಡೆಗೆ ಕದಿಯುವಿಕೆಯನ್ನು ತಡಗಟ್ಟುವ ಉದ್ದೇಶದಿಂದ ಕರ್ನಾಟಕ ವ್ಯಾಪಾರತಡೆಗೆ ಅಧಿನಿಯಮ ೧೯೫೭ರ ಉಪ-ಬಂಧಗಳ ಪ್ರಕಾರ ರಾಜ್ಯದ ಸೂಕ್ತ ಸ್ಥಳಗಳಲ್ಲಿ ಶೋಧನಾ ಠಾಣೆಗಳನ್ನು (ಸೇಲ್ಸ್ ಟ್ಯಾಕ್ಸ್ ಚೆಕ್‌ಪೋಸ್ಟ್) ನಿರ್ಮಿಸಲಾಗಿದೆ.